KAMD410016472014

Presented on : 16-07-2014
Registered on : 16-07-2014

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮಳವಳ್ಳಿ**

**ಉಪಸ್ಥಿತಿಃ**

**ಶ್ರೀಮತಿ. ನಾಜಿಯಾ ಕೌಸರ್**

**ಬಿ.ಇ.ಎಲ್.ಎಲ್.ಬಿ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ., ಮಳವಳ್ಳಿ.**

**ಸಿ.ಸಿ. ನಂ.798/2014**

**ದಿನಾಂಕ 27 ನೇ ಜೂನ್ ಮಾಹೆ 2026**

**ಪಿರ್ಯಾದಾರರುಃ –** ಹಲಗೂರು ಆರಕ್ಷಕರ ಠಾಣೆ.

**(ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು)**

– **ವಿರುದ್ಧ** –

**ಆರೋಪಿತರ ಹೆಸರು** ಃ– 1. ಶ್ರೀ ಜಿ.ಕೆ. ಚನ್ನಮಲ್ಲೇಶ ಬಿನ್ ಕುನ್ನಯ್ಯ ಜಿ.ಕೆ.
37 ವರ್ಷಗಳು,

2. ಶ್ರೀ ಕುನ್ನಯ್ಯ ಜಿ.ಕೆ. ಬಿನ್ ಲೇಟ್ ಕುಳ್ಳೇಗೌಡ
64 ವರ್ಷಗಳು (ಮರಣ ಹೊಂದಿರುತ್ತಾರೆ)

ಇಬ್ಬರ ವಾಸಃ ಗಾಣಾಳು ಗ್ರಾಮ
ಹಲಗೂರು ಹೋಬಳಿ,
ಮಳವಳ್ಳಿ ತಾಲ್ಲೂಕು. ಮಂಡ್ಯ.

**(ಪ್ರತಿನಿಧಿಸುವವರು ಶ್ರೀ.ಹೆಚ್.ಪಿ.ಆರ್. ವಕೀಲರು)**

**--- ತೀರ್ಪು ---**

ಹಲಗೂರು ಪೊಲೀಸ್ ಠಾಣೆಯ ತನಿಖಾಧಿಕಾರಿಗಳು ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ. 447,427,323 ಸಹವಾಚಕ ಕಲಂ 34 ರಡಿಯಲ್ಲಿ ದಂಡಿಸಬಹುದಾದ ಕೃತ್ಯವನ್ನು ಎಸಗಿರುತ್ತಾರೆಂದು ಆರೋಪಿಸಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

2. ***ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ*** :-

ಹಲಗೂರು ಪೊಲೀಸ್ ಠಾಣಾ ವ್ಯಾಪ್ತಿಯ ಗಾಣಾಳು ಗ್ರಾಮದ ಹತ್ತಿರ ಇರುವ ಚಾಸಾ-01 ರವರ ತಂದೆ ಕಲ್ಲೇಗೌಡ ರವರ ಹೆಸರಿನಲ್ಲಿರುವ ಮಡಹಳ್ಳಿ ಸರ್ವೇ ನಂ. 104 ರ ಜಮೀನಿಗೆ ದಿನಾಂಕ 06-03-2014 ರಂದು ರಾತ್ರಿ ಆರೋಪಿಗಳು ಅಕ್ರಮ ಪ್ರವೇಶ ಮಾಡಿ ಚಾಸಾ-01 ರವರ ಜಮೀನಿನ ಪಶ್ಚಿಮಕ್ಕಿರುವ ತಮ್ಮ ಜಮೀನನ್ನು ಜೆ.ಸಿ.ಬಿ. ಯಿಂದ ಮಟ್ಟ ಮಾಡಿಸಿ ಚಾಸಾ-01 ರವರ ಸರ್ವೇ ನಂ. 104 ರ ಜಮೀನಿನ ತೆವರಿಯನ್ನು ಜೆ.ಸಿ.ಬಿ.ಯಿಂದ ತಳ್ಳಿಸಿ ಹಾಳುಮಾಡಿರುತ್ತಾರೆ. ಚಾಸಾ-01 ರವರ ಜಮೀನಿನಲ್ಲಿದ್ದ ಪಂಪ್ ಸೆಟ್ ಮೋಟಾರ್ ಸಾರ್ಟರ್ ಪೆಟ್ಟಿಯನ್ನು ಉರುಳಿಸಿ ಕಿತ್ತುಹಾಕಿ, ಸಾರ್ಟರ್ ಪೆಟ್ಟಿಗೆ ಎಳೆದುಕೊಂಡಿದ್ದ ವಿದ್ಯುತ್ ವೈರ್ ಅನ್ನು ಕಿತ್ತು ಹಾಕಿರುತ್ತಾರೆ. ಚಾಸಾ-01 ರವರು ತಮ್ಮ ಜಮೀನಿನಲ್ಲಿ ನೆಟ್ಟುಕೊಂಡಿದ್ದ ಒಂದು ಅರ್ಧದಷ್ಟಿದ್ದ ವಿದ್ಯುತ್ ಕಂಬವನ್ನು ಉರುಳಿಸಿ ಹೊಡೆದುಹಾಕಿ, ಚಾಸಾ-01 ರವರ ಜಮೀನಿಗೆ ಮಣ್ಣನ್ನು ಹಾಕಿ ಅಕ್ರಮ ನಷ್ಟುವನ್ನುಂಟು ಮಾಡಿರುತ್ತಾರೆ. ದಿನಾಂಕ 07-03-2014 ರಂದು ಬೆಳಿಗ್ಗೆ 7-30 ಗಂಟೆಯಿಂದ 8-00 ಗಂಟೆಯ ಸಮಯದಲ್ಲಿ, ಗಾಣಾಳು ಗ್ರಾಮದಲ್ಲಿ ಬೀರೋಟಕ್ಕೆ ಹೋಗುವ ರಸ್ತೆಯಲ್ಲಿ ಆರೋಪಿ-1 ಮತ್ತು ಆರೋಪಿ-2 ರವರು ನಡೆದುಕೊಂಡು ಬರುವಾಗ, ಚಾಸಾ-02 ರವರು ಹೋಗಿ "ಏಕೆ ನಮ್ಮ ಜಮೀನಿನನ್ನು ರಾತ್ರೋ ರಾತ್ರಿ ಜೆ.ಸಿ.ಬಿ ತಂದು ಹಾಳುಮಾಡಿಸಿದ್ದೀರಿ ನಾವು ನಿಮಗೆ ಏನು ಮಾಡಿದ್ದೋ" ಎಂದು ಆರೋಪಿ-1 ಮತ್ತು ಆರೋಪಿ-2 ರವರನ್ನು ಕೇಳಿದಾಗ, ಆರೋಪಿ-1 ಯವರು "ನೀನೇನು ಕೇಳಲು ಬರೋದು, ಅದು ನಮ್ಮಿಷ್ಟ, ಜಮೀನು ನಮಗೆ ಸೇರಿದ್ದು" ಎಂದು ಚಾಸಾ-02 ರವರಿಗೆ ಹೇಳುತ್ತಾ, ಆರೋಪಿ-1 ರವರು ಏಕಾಏಕಿ ಚಾಸಾ-02 ರವರನ್ನು ಹಿಡಿದುಕೊಂಡು ತನ್ನ ಕೈಯಿಂದ ಚಾಸಾ-02 ರವರ ಕತ್ತಿನ ಮೇಲೆ, ಬೆನ್ನಿನ ಮೇಲೆ, ಮೈಮೇಲೆಲ್ಲಾ ಹೊಡೆದು

ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತಾರೆಂದು ಆಪಾದಿಸಿ ಭಾರತೀಯ ದಂಡ ಸಂಹಿತೆ ಕಲಂ. 447,427,323 ಸಹವಾಚಕ ಕಲಂ 34 ರಡಿಯಲ್ಲಿ ಪ್ರಕರಣವನ್ನು ಆರೋಪಿಗಳ ವಿರುದ್ಧ ದಾಖಲಿಸಿರುತ್ತಾರೆ.

**3**. ತನಿಖಾಧಿಕಾರಿಗಳು ತನಿಖೆಯ ನಂತರ ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ. 447,427,323 ಸಹವಾಚಕ ಕಲಂ 34 ರಡಿಯಲ್ಲಿ ದಂಡಿಸಬಹುದಾದ ಕೃತ್ಯವನ್ನು ಎಸಗಿರುತ್ತಾರೆಂದು ಆರೋಪಿಸಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ. ತನಿಖಾಧಿಕಾರಿಗಳು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ ನಂತರ ಮೇಲ್ಕಂಡ ಅಪರಾಧಗಳಿಗೆ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿಗಳಿಗೆ ನ್ಯಾಯಾಲಯದಿಂದ ಸಮನ್ಸ್ ನೀಡಲಾಯಿತು.

4. ತನಿಖಾ ಹಂತದಲ್ಲೇ ಆರೋಪಿಗಳು ಹಾಜರಾಗಿ ಜಾಮೀನು ಪಡೆದಿರುತ್ತಾರೆ. ಸಮನ್ಸ್ ಪಡೆದು ಆರೋಪಿಗಳು ಹಾಜರಾದ ನಂತರ ದೋಷಾರೋಪಣೆ ಪತ್ರದ ನಕಲನ್ನು ಒದಗಿಸಲಾಯಿತು. ದೋಷಾರೋಪಣೆ ರಚಿಸುವ ಮುನ್ನ ಆರೋಪಿಗಳ ಪರ ವಕೀಲರ ವಾದ ಆಲಿಸಲಾಯಿತು. ಮೇಲ್ಕಂಡ ಕಲಂಗಳ ಅಡಿಯಲ್ಲಿ ದೋಷಾರೋಪಣೆಯನ್ನು ರಚಿಸಿ, ಆರೋಪಿಗಳಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಗಿ ಸದರಿಯವರು ಅದನ್ನು ಅಲ್ಲಗಳೆದು ವಿಚಾರಣೆಯಾಗಬೇಕೆಂದು ಕೇಳಿಕೊಂಡ ಮೇರೆಗೆ ಅಭಿಯೋಜನೆಯ ಪರ ಸಾಕ್ಷಿದಾರರುಗಳಿಗೆ ನ್ಯಾಯಾಲಯದಿಂದ ಸಮನ್ಸ್ ನೀಡಲಾಯಿತು. ವಿಚಾರಣಾ ಹಂತದಲ್ಲಿ 2 ನೇ ಆರೋಪಿಯು ಮರಣ ಹೊಂದಿರುವ ವಿಚಾರ ನ್ಯಾಯಾಲಯದ ಗಮನಕ್ಕೆ ತಂದಿದ್ದರಿಂದ ಸದರಿಯವರನ್ನು ಪ್ರಕರಣದಿಂದ ಕೈಬಿಡಲಾಯಿತು.

5. ಅಭಿಯೋಜನೆಯು ಆರೋಪಿಗಳ ವಿರುದ್ಧ ಇರುವ ಆರೋಪಗಳನ್ನು ಸಾಬೀತು ಪಡಿಸುವುದಕ್ಕೋಸ್ಕರ ಪ್ರಾಸಾ-1 ಮತ್ತು 2 ರವರನ್ನು ವಿಚಾರಣೆ ಮಾಡಿ 05 ದಾಖಲಾತಿಗಳನ್ನು ನಿಪಿ.1 ರಿಂದ ನಿಪಿ.5 ಎಂದು ಗುರುತಿಸಿಕೊಂಡಿರುತ್ತದೆ. ಪ್ರಾಸಾ-1 ಮತ್ತು 2 ರವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ ಉಳಿದ ಸಾಕ್ಷಿದಾರರುಗಳಿಗೆ ಸಮನ್ಸ್ ನೀಡುವ ಅಭಿಯೋಜಕರ ಪ್ರಾರ್ಥನೆಯನ್ನು ತಿರಸ್ಕರಿಸಿ,

ದಂ.ಪ್ರ.ಸಂ.ಕಲಂ.313 ರಡಿಯಲ್ಲಿ ಆರೋಪಿತರ ವಿಚಾರಣೆಯನ್ನು ಕೈ ಬಿಡಲಾಯಿತು. ದಂಡ ಪ್ರಕ್ರಿಯಾ ಸಂಹಿತೆಯ ಕಲಂ 437 ಎ ರಡಿಯಲ್ಲಿ 1 ನೇ ಆರೋಪಿ ಹಾಗು ಅವರ ಜಮೀನುದಾರರು ಜಾಮೀನು ಮುಚ್ಚಳಿಕೆಯನ್ನು ಬರೆದುಕೊಟ್ಟಿರುತ್ತಾರೆ

6. ಉಭಯ ಪಕ್ಷಗಾರರ ಪರ ಮಂಡಿಸಿದ ವಾದ-ವಿವಾದಗಳನ್ನು ಆಲಿಸಲಾಗಿದೆ ಹಾಗೂ ಕಡತದಲ್ಲಿ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸುತ್ತವೆ.

**ಃ ಅಂಶಗಳು ಃ**

**ಅಂಶ 1ಃ** ದಿನಾಂಕಃ 06.03.2014 ರಂದು ರಾತ್ರಿ ಸಮಯದಲ್ಲಿ ಹಲಗೂರು ಪೊಲೀಸ್ ಠಾಣಾ ಸರಹದ್ದಿನ ಗಾಣಾಳು ಹತ್ತಿರವಿರುವ ಚಾಸಾ.1 ರವರ ತಂದೆ ಕಲ್ಲೇಗೌಡನವರ ಹೆಸರಿನಲ್ಲಿರುವ ಮಡಹಳ್ಳಿ ಜಮೀನಿನ ಸರ್ವೆ ನಂ.104 ರಲ್ಲಿ ಆರೋಪಿಗಳು ಸಮಾನ ಉದ್ದೇಶದಿಂದ ಅಕ್ರಮ ಪ್ರವೇಶ ಮಾಡಿರುತ್ತಾರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ. 447 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

**ಅಂಶ 2ಃ** ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳು ಸಮಾನ ಉದ್ದೇಶದಿಂದ ಚಾಸಾ.1 ರವರ ಜಮೀನಿನ ಪಶ್ಚಿಮಕ್ಕಿರುವ ತಮ್ಮ ಜಮೀನನ್ನು ಜೆ.ಸಿ.ಬಿ. ಯಿಂದ ಮಟ್ಟ ಮಾಡಿಸಿ ಚಾಸಾ-01 ರವರ ಸರ್ವೇ ನಂ. 104 ರ ಜಮೀನಿನ ತೆವರಿಯನ್ನು ಜೆ.ಸಿ.ಬಿ.ಯಿಂದ ತಳ್ಳಿಸಿ ಹಾಳುಮಾಡಿರುತ್ತಾರೆ. ಚಾಸಾ-01 ರವರ ಜಮೀನಿನಲ್ಲಿದ್ದ ಪಂಪ್ ಸೆಟ್ ಮೋಟಾರ್ ಸಾರ್ಟರ್ ಪೆಟ್ಟಿಯನ್ನು ಉರುಳಿಸಿ ಕಿತ್ತುಹಾಕಿ, ಸಾರ್ಟರ್ ಪೆಟ್ಟಿಗೆ ಎಳೆದುಕೊಂಡಿದ್ದ ವಿದ್ಯುತ್ ವೈರ್ ಅನ್ನು ಕಿತ್ತು ಹಾಕಿರುತ್ತಾರೆ. ಚಾಸಾ-01 ರವರು ತಮ್ಮ

ಜಮೀನಿನಲ್ಲಿ ನೆಟ್ಟುಕೊಂಡಿದ್ದ ಒಂದು ಅರ್ಧದಷ್ಟಿದ್ದ ವಿದ್ಯುತ್ ಕಂಬವನ್ನು ಉರುಳಿಸಿ ಹೊಡೆದುಹಾಕಿ, ಚಾಸಾ-01 ರವರ ಜಮೀನಿಗೆ ಮಣ್ಣನ್ನು ಹಾಕಿ ಅಕ್ರಮ ನಷ್ಟುವನ್ನುಂಟು ಮಾಡಿರುತ್ತಾರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ. 427 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

**ಅಂಶ 3ಃ** ದಿನಾಂಕ ಃ 07.03.2014 ರಂದು ಬೆಳಿಗ್ಗೆ 07.30 ರಿಂದ 08.00 ಗಂಟೆ ಸಮಯ ಮತ್ತು ಅದೇ ಸ್ಥಳದಲ್ಲಿ, ಆರೋಪಿ-1 ಮತ್ತು 2 ರವರನ್ನು ಉದ್ದೇಶಿಸಿ ಚಾಸಾ.2 ರವರು ಏಕೆ ನಮ್ಮ ಜಮೀನಿನನ್ನು ರಾತ್ರೋ ರಾತ್ರಿ ಜೆ.ಸಿ.ಬಿಯಿಂದ ತಳ್ಳಿಸಿ ಹಾಳುಮಾಡಿಸಿದ್ದೀರಿ ನಾವು ನಿಮಗೆ ಏನು ಮಾಡಿದ್ದೋ ಎಂದು ಕೇಳಿದಕ್ಕೆ, ಆರೋಪಿ-1 ರವರು ಸಮಾನ ಉದ್ದೇಶದಿಂದ ಏಕಾಏಕಿ ಚಾಸಾ-02 ರವರನ್ನು ಹಿಡಿದುಕೊಂಡು ತನ್ನ ಕೈಯಿಂದ ಚಾಸಾ-02 ರವರ ಕತ್ತಿನ ಮೇಲೆ, ಬೆನ್ನಿನ ಮೇಲೆ, ಮೈಮೇಲೆಲ್ಲಾ ಹೊಡೆದು ಮಾಡಿರುತ್ತಾರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ. 323 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

**ಅಂಶ 4.** ಆದೇಶ ಏನು?

7. ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಿದ್ದೇನೆ.

ಅಂಶ – 1 ರಿಂದ 3 ಃ ನಕಾರಾತ್ಮಕವಾಗಿ

ಅಂಶ – 4 ಃ ಅಂತಿಮ ಆದೇಶದಂತೆ
ಈ ಕೆಳಗೆ ಕಾಣಿಸಿರುವ

**ಕಾರಣಗಳು**

8. **ಅಂಶ-1 ರಿಂದ 3 ಃ-** ಈ ಎಲ್ಲಾ ಅಂಶಗಳು ಒಂದೇ ಚರ್ಚೆಯನ್ನು ಒಳಗೊಂಡಿರುವುದರಿಂದ ಪುನರುತ್ತಿಯ ನಿವಾರಣೆಗಾಗಿ ಎಲ್ಲಾ ಅಂಶಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಂಡಿದೆ.

9. ಫ್ರಾಸಾ-1 ನಾಗರಾಜು ರವರು ದೂರುದಾರರು ಹಾಗೂ ಗಾಯಾಳು ಸಾಕ್ಷಿಯಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿಗಳು ತಮ್ಮ ಜಮೀನಿಗೆ ಅಕ್ರಮವಾಗಿ ಪ್ರವೇಶ ಮಾಡಿರುವುದಿಲ್ಲ, ಯಾವುದೇ ರೀತಿಯ ನಷ್ಟವನ್ನುಂಟು ಮಾಡಿಲ್ಲ ಹಾಗೂ ತನಗೆ ಮತ್ತು ಚಾಸಾ.2 ರವರಿಗೆ ಹಲ್ಲೆ ಮಾಡಿರುವುದಿಲ್ಲ ಹಾಗುಾ ಪೊಲೀಸರಿಗೆ ಯಾವುದೇ ಮುಂದುವರಿದ ಹೇಳಿಕೆ ನೀಡಿರುವುದಿಲ್ಲ ಎಂದು ಸಾಕ್ಷ್ಯ ನುಡಿಯುವ ಮೂಲಕ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿಯಾಗಿ ಸಾಕ್ಷ್ಯ ನುಡಿದಿರುತ್ತಾರೆ.

10. ಫ್ರಾಸಾ-2 ಶಿವಮಾದಮ್ಮ ರವರು ಗಾಯಾಳು ಸಾಕ್ಷಿಯಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿಗಳು ತಮ್ಮ ಜಮೀನಿಗೆ ಅಕ್ರಮವಾಗಿ ಪ್ರವೇಶ ಮಾಡಿರುವುದಿಲ್ಲ, ಯಾವುದೇ ರೀತಿಯ ನಷ್ಟವನ್ನುಂಟು ಮಾಡಿಲ್ಲ ಹಾಗೂ ತನಗೆ ಮತ್ತು ಚಾಸಾ.1 ರವರಿಗೆ ಹಲ್ಲೆ ಮಾಡಿರುವುದಿಲ್ಲ ಹಾಗುಾ ಪೊಲೀಸರಿಗೆ ಯಾವುದೇ ಮುಂದುವರಿದ ಹೇಳಿಕೆ ನೀಡಿರುವುದಿಲ್ಲ ಎಂದು ಸಾಕ್ಷ್ಯ ನುಡಿಯುವ ಮೂಲಕ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿಯಾಗಿ ಸಾಕ್ಷ್ಯ ನುಡಿದಿರುತ್ತಾರೆ.

11. ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ.1 ಮತ್ತು 2 ರವರಿಗೆ ನ್ಯಾಯಾಲಯದ ಅನುಮತಿ ಪಡೆದು ಪಾಟೀಸವಾಲಿಗೆ ಒಳಪಟ್ಟರೂ ಫ್ರಾಸಾ.1 ಮತ್ತು 2 ರವರಿಂದ ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ಹೇಳಿಸಲು ವಿಫಲರಾಗಿರುತ್ತಾರೆ.

12. ಈ ಪ್ರಕರಣದಲ್ಲಿ ಘಟನೆಯ ದೂರುದಾರರು ಹಾಗೂ ಗಾಯಾಳು ಸಾಕ್ಷಿದಾರರಾದ ಫ್ರಾಸಾ.1 ಮತ್ತು 2 ರವರು ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿಗಳನ್ನಾಗಿ ಪರಿಣಮಿಸಿರುವುದರಿಂದ, ಅಭಿಯೋಜನೆಯು ಪ್ರಕರಣಕ್ಕೆ ಪೂರಕವಾದ ಸಾಕ್ಷ್ಯವನ್ನು ಹೊರತರುವಲ್ಲಿ ಹಾಗೂ ಆರೋಪಿಗಳ ವಿರುದ್ಧ ಹೊರಿಸಲಾದ ಆರೋಪಗಳನ್ನು

ಸಂಶಯಾತೀತವಾಗಿ ರುಜುವಾತುಪಡಿಸಲು ಸಂಪೂರ್ಣವಾಗಿ ವಿಫಲವಾಗಿರುತ್ತದೆ ಎಂದು ನಿರ್ಣಯಿಸಿ ಅಂಶ-1 ರಿಂದ 3 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

13. **ಅಂಶ 4 ಃ-** ಈ ಮೇಲ್ಕಂಡ ಕಾರಣಗಳಿಂದ ಈ ಕೆಳಕಂಡಂತೆ ಆದೇಶ ಮಾಡುತ್ತೇನೆ.

**ಃಃ ಆದೇಶ ಃಃ**

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 248(1) ರ ಅನ್ವಯ, ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ. 447,427,323 ಸಹವಾಚಕ ಕಲಂ 34 ರಡಿಯಲ್ಲಿ ಆರೋಪಿಸಲಾದ ಅಪರಾಧಗಳಿಂದ 1 ನೇ ಆರೋಪಿಯನ್ನು ನಿರ್ದೋಷಿಯೆಂದು ನಿರ್ಣಯಿಸಿ ಬಿಡುಗಡೆ ಮಾಡಲಾಗಿದೆ.

1 ನೇ ಆರೋಪಿ ಹಾಗೂ ಅವರ ಜಾಮೀನುದಾರರು ಈ ಪ್ರಕರಣದಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆ ಈ ಆದೇಶದ 6 ತಿಂಗಳ ಅವಧಿಯವರೆಗೆ ಚಾಲ್ತಿಯಲ್ಲಿರುತ್ತದೆ ಎಂದು ಆದೇಶಿಸಲಾಗಿದೆ.

(ತೀರ್ಪನ್ನು ನೇರವಾಗಿ ಗಣಕಯಂತ್ರದ ಮೂಲಕ ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಅವರಿಂದ ಬೆರಳಚ್ಚು ಮಾಡಿಸಿ ಓದಿ, ತಿದ್ದಿ ಸಹಿ ಮಾಡಿ ಇಂದು ದಿನಾಂಕಃ 27 ನೇ ಜೂನ್ – 2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು)

**(ನಾಜಿಯಾ ಕೌಸರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**& ಜೆ.ಎಂ.ಎಫ್.ಸಿ., ಮಳವಳ್ಳಿ**

**-:: ಅನುಬಂಧಗಳು :: -**

| | | |
|---|---|---|
| 01. **ಅಭಿಯೋಜಕರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ** | | |
| ಪಿ.ಡಬ್ಲ್ಯೂ.1 | : | ನಾಗರಾಜು |
| ಪಿ.ಡಬ್ಲ್ಯೂ.2 | : | ಶಿವಮಾದಮ್ಮ |
| 02. **ಅಭಿಯೋಜಕರ ಪರ ನಿಶಾನೆಗೊಳಿಸಲ್ಪಟ್ಟ ದಾಖಲೆಗಳ ಪಟ್ಟಿ** | | |
| ನಿಪಿ-1 ರಿಂದ 3 | : | ದೂರು ಮತ್ತು ಮಹಜರ್ ಗಳು |

| | | |
|---|---|---|
| ನಿಪಿ-1(ಎ) ರಿಂದ ಪಿ3(ಎ) | : | ಸಹಿಗಳು |
| ನಿಪಿ-4 | : | ಚಾಸಾ.1 ರವರ ಹೇಳಿಕೆ |
| ನಿಪಿ-5 | : | ಚಾಸಾ.2 ರವರ ಹೇಳಿಕೆ |
| 03. **ಆರೋಪಿ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:** - ಇಲ್ಲ - | | |
| 04. **ಆರೋಪಿ ಪರ ನಿಶಾನೆಗೊಳಿಸಲ್ಪಟ್ಟ ದಾಖಲೆಗಳ ಪಟ್ಟಿ:** - ಇಲ್ಲ - | | |

**(ನಾಜಿಯಾ ಕೌಸರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**& ಜೆ.ಎಂ.ಎಫ್.ಸಿ., ಮಳವಳ್ಳಿ**